Timber Yard at Mysore Road

378. Sri S. S. ARAKERI (Balloli).—

Will the Minister of State for Muncipal Administration be pleased to state :—

(*a*) whether the Timber Yard at Mysore Road, Bangalore has been formed ;

(*b*) if so, when ;

(*c*) the reasons for not shifting the Timber yard of 20th division at Super Talkies so far ;

(*d*) the steps proposed to be taken in clearing this area and to allot sites to Scheduled People of Anandapur ?

Sri B. M. PATIL (Minister of State for Mu iinistration).—

(*a*) Yes.

(*b*) During the year 1967-68.

(*c*) All attempts are being made to shift the Timber yard to the new place before 31st March 1970 ;

(*d*) Notices have been issued to all the lessees that leases have been cancelled and trade licenses will not be renewed and they should hand over vacant possession of the land and shift to the new Timber Yard.

Proposals for utilisation of the land can be taken up only after the lessees are shifted to the new yard.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈಗ ಸೂಪರ್ ಟಾಕೀಸ್ ಬಳಿ ಇರತಕ್ಕ ಟಿಂಬರ್ ಯಾರ್ಡನ್ನು ಬೇರೆ ಕಡೆಗೆ ವರ್ಗ ಮಾಡಬೇಕೆಂದು ಅಲ್ಲಿರತಕ್ಕ ಸಂಘ ಸಂಸ್ಥೆಗಳಿಂದಲೂ, ಅಲ್ಲಿ ವಾಸಮಾಡತಕ್ಕವರಿಂದಲೂ, ಮತ್ತು ರಾಜಾಮಿಲ್, ಮಿನರ್ವಾಮಿಲ್ ಕೂಲಿಗಾರರಿಂದಲೂ ಮನವಿ ಬಂದಿವೆ. 31-3-70 ರೊಳಗೆ ವರ್ಗಾಯಿಸುತ್ತೇವೆಂದು ಹೇಳಿದ್ದೀರಿ. ಮತ್ತು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಕೂಡ ಹೇಳಿದ್ದೀರಿ ; ಈಗ ತೆಗೆದುಕೊಂಡಿರತಕ್ಕ ಕ್ರಮಗಳು ಯಾವುವು, ಮತ್ತು ಅದು ಎಷ್ಟುಮಟ್ಟಿಗೆ ಕಾರ್ಯಗತವಾಗಿದೆ, ಮತ್ತು ಈ ರೀತಿ ತಡಮಾಡುವುದಕ್ಕೆ ಕಾರಣವೇನು ?

† ಶ್ರೀ ಬಿ. ಎಂ. ಪಾಟೀಲ್.—ಅಲ್ಲಿರುವ ಟಿಂಬರ್ ಮರ್ಚೆಂಟ್ಸ್ ಏನಿದ್ದಾರೆ, ಅವರೆಲ್ಲರಿಗೂ ನೋಟೀಸ್ ಕೊಟ್ಟಿದ್ದೇವೆ. ಅವರ ಲೈಸೆನ್ಸ್ ಕೆಲವು ಸಮಯದವರೆಗೆ ಮುಂದುವರಿಸಲಾಗಿದೆ. ಇನ್ನು ಮುಂದೆ 1970 ರೊಳಗೆ ಹಾಗೆ ಮಾಡದಿದ್ದರೆ, ಲೈಸನನ್ಸ್ ಮುಂದುವರಿಸುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಟಿಂಬರ್ ಯಾರ್ಡಿನ ಸುತ್ತಮುತ್ತಲೂ ಗುಡಿಸಲುಗಳು ಇರುವುದರಿಂದಲೂ, 50-60 ವರ್ಷಗಳಿಂದಲೂ ಆ ಕೂಲಿಗಾರರು ಆ ಗುಡಿಸಲುಗಳಲ್ಲಿ ವಾಸಮಾಡುವುದರಿಂದಲೂ, ಆ ಟಿಂಬರ್ ಯಾರ್ಡ್ ವರ್ಗಾವಣೆ ಮಾಡಿದಮೇಲೆ ಆ ಖಾಲಿ ಜಾಗವನ್ನು ಆ ಜನರಿಗೆ ಕೊಡಬೇಕೆಂದು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರಿಗಾಗಲೀ ಕಾರ್ಪೊರೇಷನಿಗಾಗಲೀ, ಸರ್ಕಾರ ಒಂದು ಆದೇಶವನ್ನು ಕಳಿಸುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಅದು ಸ್ಥಳಾಂತರವಾದಮೇಲೆ ಸೂಕ್ತ ಸಮಯದಲ್ಲಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಈಗಲೇ ಆ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—1967-68 ನೇ ಇಸವಿಯಲ್ಲಿಯೇ ಹೊಸ ಟಿಂಬರ್ ಯಾರ್ಡ್ ಅನ್ನು ವ್ಯವಸ್ಥೆಮಾಡಲಾಗಿದೆ. ಈಗ ಹಳೇ ಟಿಂಬರ್ ಯಾರ್ಡ್ ಎಂದರೆ ನೂಪರ್ ಸಿನಿಮಾ ಪಕ್ಕದಲ್ಲಿರತಕ್ಕ ಟಿಂಬರ್ ಯಾರ್ಡಿನಲ್ಲಿ ಇರತಕ್ಕ ಬಾಡಿಗೆದಾರರಲ್ಲಿ ಲೈಸೆನ್ಸ್ ಪಡೆದುಕೊಂಡಿರುವವರೂ ಇದ್ದಾರೆ, ಲೈಸೆನ್ಸ್ ಪಡೆಯದೇ ಇರುವವರೂ ಇದ್ದಾರೆ. ಆದ್ದರಿಂದ ಲೈಸೆನ್ಸ್ ಪಡೆಯದೇ ಇರುವವರಮೇಲೆ ತಾವು ಏನು ಕ್ರಮತೆಗೆದುಕೊಂಡಿದ್ದೀರಿ ? ಮತ್ತು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿಯವರು ಜಾಗಕ್ಕೋಸ್ಕರ ಹಣ ಕಟ್ಟಿ ನಾಲ್ಕುವರ್ಷಗಳಾಯಿತು. ಆದರೂ ಸಹ ಅವರಿಗೆ ಆ ಜಾಗದ ಪೊಜಿಷನ್ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಣ ಕಟ್ಟಿಸಿಕೊಂಡು ಅವರಿಗೆ ಜಾಗದ ಪೊಜಿಷನ್ ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಬಿ. ಎಂ. ಪಾಟೀಲ್.—ಯಾರು ಯಾರು ಲೈಸೆನ್ಸ್ ಇಲ್ಲದೇ ತಮ್ಮ ಉದ್ಯೋಗವನ್ನು ನಡೆಸುತ್ತಿದ್ದಾರೆ ಎನ್ನುವ ಯಾವುದೇ ಕೇಸು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂಥಾ ಕೇಸುಗಳು ಸರ್ಕಾರದ ಗಮನಕ್ಕೆ ಬಂದರೆ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಮಾರ್ಕೆಟಿಂಗ್ ಕಮಿಟಿಯವರು ಏನು ಜಾಗವನ್ನು ಕೇಳಿದ್ದಾರೆ ಆ ಬಗ್ಗೆ ನನ್ನ ಹತ್ತಿರ ಇನ್‌ಫರ್ ಮೇಷನ್ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಹಳೆಯ ಟಿಂಬರ್ ಯಾರ್ಡಿನಲ್ಲಿರತಕ್ಕವರು ಹೊಸ ಟಿಂಬರ್ ಯಾರ್ಡಿಗೆ ತಮ್ಮ ಟಿಂಬರ್ ಡಿಪೋಗಳನ್ನು ಷಿಫ್ಟ್ ಮಾಡಲು ಕೆಲವು ಸೌಕರ್ಯಗಳನ್ನು ಒದಗಿಸ ಬೇಕು. ಅವುಗಳನ್ನು ಒದಗಿಸುವ ಹೊರತು ನಾವು ಅಲ್ಲಿಗೆ ಹೋಗುವುದಿಲ್ಲ ಎಂದು ಅವರು ಹಠ ಮಾಡಿದ್ದಾರೆ. ಆ ಬಗ್ಗೆ ತಾವು ಏನು ಯೋಚನೆ ಮಾಡಿದ್ದೀರಿ ?

ಶ್ರೀ ಬಿ. ಎಂ. ಪಾಟೀಲ್.—ಅವಶ್ಯವಾಗಿ ಏನು ಸೌಲಭ್ಯಗಳು ಬೇಕೋ ಅವುಗಳನ್ನು ಕೊಡಲಾಗಿದೆ. ಎಷ್ಟೆಕ್ಸಿಟಿ ಇವೆ. ನೀರಿನ ಸೌಕರ್ಯ ಒದಗಿಸುವ ಏರ್ಪಾಟು ಮಾಡಿದ್ದಾರೆ. ರೋಡು ಫಾರಂ ಮಾಡಿದ್ದಾರೆ. ಟ್ರಸ್ಟ್ ಬೋರ್ಡಿನವರು ಅವಶ್ಯವಾದ ಎಲ್ಲಾ ಸೌಕರ್ಯಗಳನ್ನು ಒದಗಿಸಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್. —ಈಗ ಇರತಕ್ಕ ಹಳೆಯ ಟಿಂಬರ್ ಯಾರ್ಡನ್ನು ಹೊಸ ಟಿಂಬರ್ ಯಾರ್ಡಿಗೆ ಷಿಫ್ಟ್ ಮಾಡಿದಮೇಲೆ ಆ ಜಾಗವನ್ನು ಬಡವರಿಗೆ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ ಕೊಡಬೇಕೆಂದು ಅವರು ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ಆ ಜಾಗವನ್ನು ಅವರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಕೂಲಿಗಾರರು, ಕಾರ್ಮಿಕರು ಮತ್ತು ಬಡವರ ಬಗ್ಗೆ ಸರ್ಕಾರ ದವರಿಗೆ ಸಹಾನುಭೂತಿ ಇದೆ. ಈ ವಿಷಯವನ್ನು ಸೂಕ್ತ ಸಮಯದಲ್ಲಿ ಪರಿಶೀಲನೆ ಮಾಡುತ್ತೇವೆ.

Laying of new Railway Lines in the State

413. Sri SIDDIAH KASHIMATH (Shirhatti).—

Will the Minister for Public Works be pleased to state :—

(*a*) whether Government have made any proposals to the Central Government for laying of new Railway Lines in the State for inclusion in the Fourth Plan :

(*b*) whether the new Broad gauge line from Hubli to Karwar has been included in the proposal :

(*c*) whether Government have also made any proposals for conversion of the following existing meter gauge railway lines to broad gauge ;

(i) Hospet to Hubli ;
(ii) Hubli to Miraj ;
(iii) Hubli to Bangalore ?